# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ರವರು ನಿಯಮ 330ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:72ಕ್ಕೆ ಉತ್ತರ.

****

ವಿಷಯ:

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿಯಲ್ಲಿ ಏತ ನೀರಾವರಿ ಯೋಜನೆಯನ್ನು ಹೊಂದಿರುವ ಹಳ್ಳಿಗಳಿಗೆ ಸರ್ಕಾರದಿಂದ ಮಂಜೂರು ಮಾಡಲಾದ ಹಣವನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡದೇ ಇರುವುದರಿಂದ ಹಳ್ಳಿಗಳ ಕೆರೆಗಳಿಗೆ ನೀರು ತುಂಬಿಸಲಾಗದೇ ಸದರಿ ಯೋಜನೆಯು ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಅದೇರೀತಿ ಮೇಲುಕೋಟೆ ಹೋಬಳಿಯ ಕಾಡೇನಹಳ್ಳಿ ಗ್ರಾಮಕ್ಕೆ ಏತ ನೀರಾವರಿ ಯೋಜನೆಯ ಕಾರ್ಯ ಯಾವಾಗಿನಿಂದ ಪ್ರಾರಂಭವಾಗುವುದು ಎಂಬ ಮಾಹಿತಿಯೊಂದಿಗೆ ಮೇಲುಕೋಟೆ ಹೋಬಳಿಯಲ್ಲಿ ಏತ ನೀರಾವರಿ ಯೋಜನೆಯನ್ನು ಹೊಂದಿರುವ ಹಳ್ಳಿಗಳಿಗೆ ಪ್ರತಿಯೊಂದು ಹಳ್ಳಿಯ ಪ್ರಸ್ತುತ ಪರಿಸ್ಥಿತಿಯ ಕುರಿತು ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

******

ಉತ್ತರ:-

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿಯಲ್ಲಿ ಬರುವ ಬಳಘಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆರೆಗಳಿಗೆ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುವ ಹಾಗೂ ಸೂಕ್ಷ್ಮ (ಮೈಕ್ರೋ) ನೀರಾವರಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯನ್ನು ರೂ.18516.00 ಲಕ್ಷಗಳ ಮೊತ್ತಕ್ಕೆ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಕೃಷ್ಣರಾಜಸಾಗರದ ಕೆಳಭಾಗದ ಕಾವೇರಿ ನದಿ ಪಾತ್ರದಿಂದ ಮಂಡ್ಯ ಜಿಲ್ಲೆ, ಮೇಲುಕೋಟೆ ಕ್ಷೇತ್ರದ 51 ಕೆರೆ ಕಟ್ಟೆಗಳಿಗೆ ಈ ಕೆಳಕಂಡ 3 ಹಂತಗಳಲ್ಲಿ ಏತ ನೀರಾವರಿ ಮೂಲಕ ನೀರು ತುಂಬಿಸಲು ಯೋಜಿಸಲಾಗಿದೆ.

- ಮೊದಲನೇ ಹಂತದಲ್ಲಿ ಜಾಕ್‌ವೆಲ್ ಕಂ ಪಂಪ್ ಹೌಸ್‌ನ್ನು ಕೃಷ್ಣರಾಜಸಾಗರದ ಕೆಳಭಾಗದಲ್ಲಿ ನಿರ್ಮಿಸಿ 32.00 ಕ್ಯೂಸೆಕ್ಸ್ ಪ್ರಮಾಣದ ನೀರನ್ನು ಎತ್ತಿ 950 ಹೆಚ್.ಪಿ ಸಾಮರ್ಥ್ಯದ 4(3+1) ವರ್ಟಿಕಲ್ ಟರ್ಬೈನ್ ಪಂಪ್ ಅಳವಡಿಸಿ 17.85 ಕಿ.ಮೀ ಉದ್ದದ 850ಮಿ.ಮೀ ವ್ಯಾಸದ ಎಂ.ಎಸ್.ಪೈಪ್‌ಗಳ ಮುಖಾಂತರ ಸಣಬ ಕೆರೆ ತುಂಬಿಸುವುದರ ಜೊತೆಗೆ ಒಟ್ಟು 10 ಕೆರೆಗಳಿಗೆ ನೀರನ್ನು ತುಂಬಿಸಲು ಯೋಜಿಸಲಾಗಿರುತ್ತದೆ. ಸದರಿ 1ನೇ ಹಂತದ ಯೋಜನೆಯನ್ನು ದಿ:29.09.2021 ರಂದು ಚಾಲನೆಗೊಳಿಸಿ ಈಗಾಗಲೇ ಯೋಜಿತ 10 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ. ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

- ಎರಡನೇ ಹಂತದಲ್ಲಿ ಪಾಂಡವಪುರ ತಾಲ್ಲೂಕಿನ ಸಣಬ ಕೆರೆ ಬಳಿ ಜಾಕ್‌ವೆಲ್ ಕಂ ಪಂಪ್ ಹೌಸ್‌ನ್ನು ನಿರ್ಮಿಸಿ 30.00 ಕ್ಯೂಸೆಕ್ಸ್ ಪ್ರಮಾಣದ ನೀರನ್ನು ಎತ್ತಿ 850 ಹೆಚ್.ಪಿ ಸಾಮರ್ಥ್ಯದ 4(3+1) ವರ್ಟಿಕಲ್ ಟರ್ಬೈನ್ ಪಂಪ್ ಅಳವಡಿಸಿ 11.725 ಕಿ.ಮೀ ಉದ್ದದ 800 ಮಿ.ಮೀ ವ್ಯಾಸದ ಎಂ.ಎಸ್.ಪೈಪ್‌ಗಳ ಮುಖಾಂತರ ದಳವಾಯಿ ಕೆರೆ

ತುಂಬಿಸುವುದರ ಜೊತೆಗೆ ಒಟ್ಟು 12 ಕೆರೆಗಳಿಗೆ ನೀರನ್ನು ತುಂಬಿಸಲು ಯೋಜಿಸಲಾಗಿರುತ್ತದೆ. ಸದರಿ 2ನೇ ಹಂತದ ಯೋಜನೆಯನ್ನು ದಿ:14.03.2022 ರಂದು ಚಾಲನೆಗೊಳಿಸಿ ಈಗಾಗಲೇ ಯೋಜಿತ 12 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ. ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

- ಮೂರನೇ ಹಂತದಲ್ಲಿ ಪಾಂಡವಪುರ ತಾಲ್ಲೂಕಿನ ದಳವಾಯಿ ಕೆರೆ ಬಳಿ ಜಾಕ್‌ವೆಲ್ ಕಂ ಪಂಪ್ ಹೌಸ್‌ನ್ನು ನಿರ್ಮಿಸಿ 24.50 ಕ್ಯೂಸೆಕ್ಸ್ ಪ್ರಮಾಣದ ನೀರನ್ನು ಎತ್ತಿ 550 ಹೆಚ್.ಪಿ ಸಾಮರ್ಥ್ಯದ 4(3+1) ವರ್ಟಿಕಲ್ ಟರ್‌ಬೈನ್ ಪಂಪ್ ಅಳವಡಿಸಿ 4.46 ಕಿ.ಮೀ ಉದ್ದದ 725 ಮಿ.ಮೀ ವ್ಯಾಸದ ಎಂ.ಎಸ್.ಪೈಪ್‌ಗಳ ಮುಖಾಂತರ ಒಟ್ಟು 29 ಕೆರೆಗಳಿಗೆ ನೀರನ್ನು ತುಂಬಿಸಲು ಯೋಜಿಸಲಾಗಿರುತ್ತದೆ. ಸದರಿ 3ನೇ ಹಂತದ ಯೋಜನೆಯನ್ನು ದಿ:31.03.2022 ರಂದು ಚಾಲನೆಗೊಳಿಸಿ ಯೋಜಿತ 29 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ.
  ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮುಂದುವರೆದು, 3ನೇ ಹಂತದಲ್ಲಿ ಯೋಜಿತ 1044 ಹೆಕ್ಟೇರ್ ಜಮೀನುಗಳಿಗೆ ಸೂಕ್ಷ್ಮ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯು ಮುಕ್ತಾಯಗೊಂಡಿದ್ದು, ಪ್ರಾಯೋಗಿಕವಾಗಿ ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸದರಿ ಯೋಜನೆಗೆ ಮಂಜೂರು ಮಾಡಿರುವ ಅನುದಾನವು ಸಂಪೂರ್ಣವಾಗಿ ಸದ್ಬಳಕೆಯಾಗಿದ್ದು, ಯೋಜನೆಯು ಫಲಪ್ರದವಾಗಿರುತ್ತದೆ. ಬಳಘಟ್ಟ ಏತ ನೀರಾವರಿ ಯೋಜನೆಯಡಿಯಲ್ಲಿ ಕಾಡೇನಹಳ್ಳಿ ಗ್ರಾಮ/ಕೆರೆಯನ್ನು ತುಂಬಿಸಲು ಉದ್ದೇಶಿಸಿರುವುದಿಲ್ಲ ಹಾಗೂ ಪ್ರಸ್ತಾವನೆ ಇರುವುದಿಲ್ಲ.

ಕಡತ ಸಂಖ್ಯೆ:MID 198 LAQ 2022.

(ಜೆ.ಸಿ.ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಶಾಸನ ರಚನೆ
ಹಾಗೂ ಸಣ್ಣ ನೀರಾವರಿ ಸಚಿವರು.

| ಕ್ರ. ಸಂ | ಯೋಜನೆಯ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಗುತ್ತಿಗೆ ಮೊತ್ತ ರೂ. ಲಕ್ಷಗಳಲ್ಲಿ | ಕಾಮಗಾರಿಯ ಇದುವರೆಗಿನ ವೆಚ್ಚ ರೂ. ಲಕ್ಷಗಳಲ್ಲಿ | ನೀರು ತುಂಬಿಸಲು ಯೋಜಿಸಲಾದ ಕೆರೆಗಳ ಸಂಖ್ಯೆ | ಕೆರೆಗಳ ಹೆಸರು | ಕೆರೆಗಳ ಸಾಮರ್ಥ್ಯ | ಷರಾ |
|---|---|---|---|---|---|---|---|---|
| | | | | | | 3ನೇ ಹಂತ | 3ನೇ ಹಂತ | 3ನೇ ಹಂತದ ಏತ ನೀರಾವರಿ ಯೋಜನೆಯನ್ನು ದಿ:31.03.2022 ರಂದು ಚಾಲನೆಗೊಳಿಸಿ, ಯೋಜಿಸಲಾಗಿರುವ ಒಟ್ಟು 29 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ. |
| | | | | | | 23.ಹೊಸಹಳ್ಳಿ ಕೆರೆ | 0.60 | |
| | | | | | | 24.ಕದಲಗೆರೆ ಹೊಸಕೆರೆ | 45.00 | |
| | | | | | | 25.ಹರನಕಟ್ಟೆ | 2.72 | |
| | | | | | | 26.ಕನಗೋನಹಳ್ಳಿ ಕೆರೆ | 1.46 | |
| | | | | | | 27.ಓಬಳಚಾರಿಕಟ್ಟೆ | 0.65 | |
| | | | | | | 28.ಹುಣಸನಕಟ್ಟೆ | 0.75 | |
| | | | | | | 29.ಚಲ್ಲರಹಳ್ಳಿಕೊಪ್ಪಲು ಕೆರೆ | 0.87 | |
| | | | | | | 30.ಎಲೆಕೆರೆ | 1.30 | |
| | | | | | | 31.ಸಿಂಗೇಗೌಡನಕಟ್ಟೆ | 1.40 | |
| | | | | | | 32.ಊರಮುಂದಿನ ಕೆರೆ | 0.60 | |
| | | | | | | 33.ಗೌಡನಕಟ್ಟೆ | 1.65 | |
| | | | | | | 34.ರಂಗಪ್ಪನಕಟ್ಟೆ | 0.50 | |
| | | | | | | 35.ಊರಮುಂದಿನ ಕೆರೆ | 0.50 | |
| | | | | | | 36.ಕೆಂಚನಹಟ್ಟಿ ಕಟ್ಟೆ | 0.50 | |
| | | | | | | 37.ಹಿರಿಕೇರೆ | 1.00 | |
| | | | | | | 38.ಬಸ್ತಿಕಟ್ಟೆ | 0.90 | |
| | | | | | | 39.ಬಳಘಟ್ಟ ಹಿರಿಕೆರೆ | 1.68 | |
| | | | | | | 40.ಪಗಡೇಕಲ್ಲಹಳ್ಳಿ ಕೆರೆ | 1.60 | |
| | | | | | | 41.ನರಸಿಂಹಚಾರಿ ಕಟ್ಟೆ | 1.00 | |
| | | | | | | 42.ತ್ಯೇಪೇಗೌಡನಕಟ್ಟೆ | 0.50 | |
| | | | | | | 43. ಐಯಂಗಾರಿ ಕಟ್ಟೆ | 0.85 | |
| | | | | | | 44.ಶೆಟ್ಟಿಕೆರೆ | 3.25 | |
| | | | | | | 45.ಊರಮುಂದಿನ ಕೆರೆ | 0.50 | |
| | | | | | | 46.ಅಮ್ಮನಕಟ್ಟೆ | 0.90 | |
| | | | | | | 47ಗೌಡನಕಟ್ಟೆ | 0.65 | |
| | | | | | | 48.ಹಿರೇಕಟ್ಟೆ | 0.80 | |
| | | | | | | 49.ಗುಜುಗೋನಹಳ್ಳಿ ಕೆರೆ | 1.50 | |
| | | | | | | 50.ದಾಸನಕಟ್ಟೆ | 0.50 | |
| | | | | | | 51.ಬಸ್ತಿಕಟ್ಟೆ | 0.60 | |

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ಗಮನ ಸೆಳೆಯುವ ಸೂಚನೆ ನಿಯಮ 330 ಕ್ಕೆ ಅನುಬಂಧ

| ಕ್ರ. ಸಂ | ಯೋಜನೆಯ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಗುತ್ತಿಗೆ ಮೊತ್ತ ರೂ. ಲಕ್ಷಗಳಲ್ಲಿ | ಕಾಮಗಾರಿಯ ಇದುವರೆಗಿನ ವೆಚ್ಚ ರೂ. ಲಕ್ಷಗಳಲ್ಲಿ | ನೀರು ತುಂಬಿಸಲು ಯೋಜಿಸಲಾದ ಕೆರೆಗಳ ಸಂಖ್ಯೆ | ಕೆರೆಗಳ ಹೆಸರು | ಕೆರೆಗಳ ಸಾಮರ್ಥ್ಯ | ಷರಾ |
|---|---|---|---|---|---|---|---|---|
| 1 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಬಳಘಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆರೆಗಳಿಗೆ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುವ ಹಾಗೂ ಸೂಕ್ಷ್ಮ (ಮೈಕ್ರೋ) ನೀರಾವರಿ ವ್ಯಸ್ಥೆ ಕಲ್ಪಿಸುವ ಕಾಮಗಾರಿ | 19000.00 | 18516.00 | 18040.82 | 51 | 1ನೇ ಹಂತ | 1ನೇ ಹಂತ | 1ನೇ ಹಂತದ ಏತ ನೀರಾವರಿ ಯೋಜನೆಯನ್ನು ದಿ:29.09.2021 ರಂದು ಚಾಲನೆಗೊಳಿಸಿ, ಯೋಜಿಸಲಾಗಿರುವ ಒಟ್ಟು 10 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ. |
| | | | | | | 1.ಕಟ್ಟೇರಿ ಕೆರೆ | 1.20 | |
| | | | | | | 2.ಹಾಗನಹಳ್ಳಿ ಕೆರೆ | 1.20 | |
| | | | | | | 3.ಬೇಬಿ ಕೆರೆ | 0.62 | |
| | | | | | | 4.ಮಾಡರಹಳ್ಳಿ ಕೆರೆ | 10.20 | |
| | | | | | | 5.ಹೊನಗಾನಹಳ್ಳಿ ಕೆರೆ | 1.43 | |
| | | | | | | 6.ಚಿನಕುರಳಿ ಕೆರೆ | 3.90 | |
| | | | | | | 7.ದೊಡ್ಡಬೋಗನಹಳ್ಳಿ ಕೆರೆ | 1.75 | |
| | | | | | | 8.ಇಳ್ಳೇನಹಳ್ಳಿ ಕೆರೆ | 1.60 | |
| | | | | | | 9.ಕಾಳೇಗೌಡನಕೊಪ್ಪಲು ಕೆರೆ | 0.90 | |
| | | | | | | 10.ಸಣಬಕಟ್ಟೆ 1ನೇ ಹಂತ ಡಿ.ಸಿ.ಕೆರೆ | 1.50 | |
| | | | | | | 2ನೇ ಹಂತ | 2ನೇ ಹಂತ | 2ನೇ ಹಂತದ ಏತ ನೀರಾವರಿ ಯೋಜನೆಯನ್ನು ದಿ:14.03.2022 ರಂದು ಚಾಲನೆಗೊಳಿಸಿ, ಯೋಜಿಸಲಾಗಿರುವ ಒಟ್ಟು 12 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ. |
| | | | | | | 11.ಕದಬಾ | 1.70 | |
| | | | | | | 12.ನಳ್ಳೇನಹಳ್ಳಿ ಅಮ್ಮಣಿಕೆರೆ | 3.70 | |
| | | | | | | 13.ಲಕ್ಕಿ ಕಟ್ಟೆ | 0.90 | |
| | | | | | | 14.ನಳ್ಳೇನಹಳ್ಳಿ ಕಟ್ಟೆ | 0.90 | |
| | | | | | | 15.ವಿಜನಕಟ್ಟೆ | 0.50 | |
| | | | | | | 16.ಹಂದಿಕಟ್ಟೆ | 7.10 | |
| | | | | | | 17.ಹುಳಿಗೆರೆ ಕೆರೆ | 8.50 | |
| | | | | | | 18.ಕಟ್ಟೆ-1 | 1.50 | |
| | | | | | | 19.ಕಟ್ಟೆ-2 | 0.80 | |
| | | | | | | 20.ಕಾಮಾನಾಯಕನಹಳ್ಳಿ ಕೆರೆ | 8.40 | |
| | | | | | | 21.ನಾರಾಯಣಪುರ ಕೆರೆ | 11.50 | |
| | | | | | | 22.ದಳವಾಯಿಕೆರೆ | 8.75 | |